॥ಶ್ರೀಃ॥

ಶ್ರೀಗುರುವಿಜಯವಿಠ್ಠಲಾಂಕಿತದಾಸವರ್ಯ ಕೃತ

# ಶ್ರೀಮುಖ್ಯಪ್ರಾಣದೇವರ ಸುಳಾದಿ

॥ ಧ್ರುವತಾಳ ॥

ಘನದಯಾನಿಧಿಯಾದ ಪವನರಾಯನೇ ನಮೋ
ಪುನರಪಿ ನಮೋ ನಿನ್ನ ಪಾದಸರಸೀರುಹಕೆ
ಮಣಿದು ಬೇಡಿಕೊಂಬೆ ನೀನೇ ಗತಿಯೆಂದು
ನಿನಗಿಂತ ಹಿತರ್‍ಯಾರೋ ಜೀವನಕೆ
ಸನಕಾದಿವಂದ್ಯನ ಆಜ್ಞೆಯಿಂದಲಿ ಪರ
ಮಾಣುಜೀವಿಗಳಲ್ಲಿ ವ್ಯಾಪ್ತನಾಗಿ ಬಿಡದೆ
ಅಣುರೂಪಗಳಿಂದ ನಿಂದು ಮಾಡಿದ ಕ್ರಿಯ
ಮನಸಿಜ ವೈರಿಯಿಂದ ತಿಳಿಯಲೊಶವೆ
ಹೀನ ಮಸಿನಿಂದ  ಬದ್ಧನಾದವನು ನಾನು
ಗುಣ ರೂಪ ಕ್ರಿಯೆಗಳ ವಿದಿತ ನೀನು
ತನುವಿನೊಳಗೆ ಮೂರುಕೋಟ್ಯಧಿಕ ಎಪ್ಪತ್ತೆರಡು
ಎನಿಪ ಸಾಸಿರರೂಪದಿಂದ ಸತಿಯ ಸಹಿತ
ತೃಣ ಮೊದಲಾದ ಜೀವ ಪ್ರಕೃತಿ ಕಾಲ ಕರ್ಮ
ಅನುಸಾರವಾಗಿ ಕ್ರಿಯೆಗಳನೆ ಮಾಡಿ
ಅನಿಮಿತ್ತ ಬಾಂಧವನೆನಿಸಿ ಸಜ್ಜನರಿಗೆ
ಜ್ಞಾನ ಭಕ್ತ್ಯಾದಿಗಳ ನೀನೆ ಇತ್ತು
ಮನದಲಿ ಹರಿರೂಪ ಸಂದರುಶನವಿತ್ತು

ಘನೀಭೂತವಾದ ಆನಂದದಿಂದ
ವಿನಯದಿಂದಲಿ ಜೀವರ ಪೊರೆವ ಉಪಕಾರ
ವನು ಸ್ಮರಿಸಲಾಪೆನೆ ಎಂದಿಗು ಗುಣನಿಧಿಯೆ
ಇನಕೋಟಿತೇಜ ಗುರುವಿಜಯವಿಠ್ಠಲರೇಯ
ಇನಿತು ನಿನ್ನೊಳು ಲೀಲೆ ಮಾಳ್ಪ ಆವಾಕಾಲ || 1 ||

|| ಮಟ್ಟತಾಳ ||

ಮಿನುಗುವ ಕಂಠದಲಿ ಎರಡು ದಳದ ಕಮಲ
ಕರ್ಣಿಕ ಮಧ್ಯದಲಿ ಸತಿಸಹಿತಲಿದ್ದು
ವನಜಾಸನವಿಡಿದು ತೃಣಜೀವರ ತನಕ
ತನುಗಳಿಗೆ ವಿಹಿತವಾದ ಶಬ್ದಗಳನ್ನು
ನೀನೇ ಮಾಡಿ ಅವರವರಿಗೆ ಉಣಿಸುತ್ತ
ಘನತೆಯನೆ ಇತ್ತು ಕಾಣಿಸಿಕೊಳ್ಳದಲೆ
ಮನುಜಾಧಮರಿಗೆ ಮಾಯವ ಮೊಸಗಿಸಿ
ಕೊನೆಯ ಗುಣದವರನ್ನು ನಿತ್ಯದುಃಖಗಳಿಂದ
ದಣಿಸುವೆ ಪ್ರಾಂತದಲಿ ಕೊನೆಮೊದಲಿಲ್ಲದಲೆ
ದನುಜಮರ್ದನ ಗುರುವಿಜಯವಿಠ್ಠಲರೇಯ
ನಿನಗಿತ್ತನೀಪರಿ ಸ್ವಾತಂತ್ರ್ಯಮಹಿಮೆಯನು || 2 ||

|| ರೂಪಕತಾಳ||

ನಾಸಿಕ ಎಡದಲ್ಲಿ ಭಾರತಿ ತಾನದೋ
ಶ್ವಾಸ ಬಿಡಿಸುವಳು ನಿನ್ನಾಜ್ಞದಿ

ನಾಸಿಕ ಬಲದಲ್ಲಿ ಈಶನಾಜ್ಞದಿ ಊರ್ಧ್ವ
ಶ್ವಾಸ ಬಿಡಿಸಿ ಪೊರೆವ ಜೀವರನ್ನು
ತಾಸಿಗೊಂಬೈನೂರು ಕ್ರಮದಿ ಇಪ್ಪತ್ತೊಂದು
ಸಾಸಿರದಾರ್ನೂರು ದಿನದಿನದಿ
ಭೂಃ ಶಬ್ದದಿಂದಲಿ ಹರಿಯನ್ನೆ ಪೂಜಿಸುವ
ಆಸೀತಿ ನಾಲಕ್ಕುಲಕ್ಷ ಜೀವರಿಗೆ
ಲೇಸು ಮಿಶ್ರಗಳನ್ನು ಆದರಂತೆ ನಿರ್ದೇಶ
ವಾಸಗೈಸುವೆ ನೀನೆ ಪ್ರಾಂತದಲಿ
ಈ ಸುಜ್ಞಾನವ ತಿಳಿದುಪಾಸನ ಮಾಳ್ಪರಿಗೆ
ಶ್ವಾಸಮಂತ್ರದ ಪುಣ್ಯ ಲೇಶವೀವೆ
ಕಾಸಿನಿಂದಲಿ ಕೋಟಿದ್ರವ್ಯ ಪ್ರಾಪುತದಂತೆ
ವಾಸುದೇವನು ಇದಕೆ ತುಷ್ಟನಾಗಿ
ಈ ಶರೀರದಿ ಪೊಳೆದು ಕ್ಲೇಶಪರಿಹರಿಪ
ಈ ಸಂಜ್ಞೆಯಿಂದಲಿ ದಿವಿಜರೆಲ್ಲಾ
ದಾಸರಾಗಿಹರೈಯ್ಯ ನಿನ್ನ ಪಾದವ ಬಿಡದೆ
ಕ್ಲೇಶ ಆನಂದಗಳೆಲ್ಲ ನಿನ್ನಾಧೀನ
ದೇಶಕಾಲಪೂರ್ಣ ಗುರುವಿಜಯವಿಠ್ಠಲ
ಭಾಸುರಜ್ಞಾನ ನಿನ್ನಿಂದಲೀವ II 3 II

II ಝಂಪೆತಾಳII
ಪಂಚದ್ವಾರಗಳಲ್ಲಿ ಪಂಚವಪುಷಗಳಿಂದ
ಪಂಚರೂಪನ ಧ್ಯಾನಮಾಳ್ಪ ನಿನ್ನ

ಪಂಚಮುಖ ಮೊದಲಾದ ಸುರರೆಲ್ಲರು ನಿ
ಶ್ಚಂಚಲದಿ ಭಜಿಸುತಿರೆ ಅವರವರ
ವಾಂಛಿತಗಳನ್ನಿತ್ತು ಪೊರೆವ ಮುಖ್ಯಪ್ರಾಣ
ಪಂಚೀಕರಣಕ್ಕೆ ಮುಖ್ಯಮಾನಿ ನೀನೆ
ಪಂಚರೂಪಗಳಿಂದ ಪಂಚಾಗ್ನಿಗತನಾಗಿ
ಪಂಚವ್ಯಾಪಾರಗಳ ಮಾಳ್ಪ ದೇವಾ
ಪಂಚದ್ವಾರದಲ್ಲಿಪ್ಪ ಪಂಚಪಂಚಮರರು
ಪಂಚಭೇದಗಳರುಹಿ ಶುದ್ಧಶಾಸ್ತ್ರಗಳಿಂದ ಪ್ರ-
ಪಂಚವನು ಸಲಹಿದ ಉಪಕಾರಿಯೆ ನಿ-
ಷ್ಕಿಂಚನರ ಪ್ರೀಯ ಗುರವಿಠ್ಠಲರೇಯ
ಮಿಂಚಿನಂದದಿ ಪೊಳೆವಂತೆ ಮಾಡೋ ॥ 4 ॥

॥ತ್ರಿಪುಟತಾಳ ॥

ದಳ ಅಷ್ಟವುಳ್ಳ ರಕ್ತಾಂಬುಜದಮಧ್ಯ
ಪೊಳೆವ ಕರ್ಣಿಕೆಯಲ್ಲಿ ಶೊಭಿಸುವ
ಮೂಲೇಶನ ಪಾದಪಂಕಜದಲಿ ನಿಂದು
ಸಲೆ ಭಕುತಿಯಿಂದ ಪೂಜಿಸುವ ನಿನ್ನ ಚರಣ
ಮೂಲದಲ್ಲಿ ಜೀವ ಆಶ್ರೈಸಿ ಇಪ್ಪನಾಗಿ
ಸ್ಥಳವ ಸೇರಿಪ ಭಾರ ನಿನ್ನದಯ್ಯಾ
ಒಲ್ಲೆನೆಂದರೆ ಬಿಡದು ಭಕುತರ ಅಭಿಮಾನ
ಒಲಿದು ಪಾಲಿಸಬೇಕು ಘನಮಹಿಮ
ಖಳದರ್ಪಭಂಜನ ಗುರುವಿಜಯವಿಠ್ಠಲ

ಒಲಿವ ನಿನ್ನ ಕೃಪೆಗೆ ವಿಮಲಚರಿತ || 5||

||ಅಟ್ಟತಾಳ ||

ಜಾಗರ ಸ್ವಪ್ನ ಸುಷುಪ್ತಿಯಲ್ಲಿ ನೀನೇ
ಜಾಗರೂಕನಾಗಿ ಜೀವರ ಪಾಲಿಪೆ
ಭಾಗತ್ರಯದಲ್ಲಿ ವಿಭಾಗವ ಮಾಡುವೆ
ನಾಗಭೂಷಣಾದಿ ಸುರರಿಗೆ ಜೀವನ
ಸಾಗರ ಮೊದಲಾದ ಸಕಲದರಲಿ ವ್ಯಾಪ್ತ
ನಾಗರಾಜನ ಅಂಗುಟದಿ ಮೀಟಿದ ಶಕ್ತ
ಯುಗಾದಿಕೃತನಾಮ ಗುರುವಿಜಯವಿಠ್ಠಲನ
ಯೋಗವ ಪಾಲಿಸಿ ಭವದೂರ ಮಾಡುವುದು || 6 ||

|| ಆದಿತಾಳ ||

ಅಸುರರ ಪುಣ್ಯವನು ಭಕುತರಿಗಿತ್ತು ಅವ-
ರ ಸಮೀಚೀನಕರ್ಮ ದನುಜರಿಗುಣಿಸುವೆ
ಈಶನೇ ಗತಿಯೆಂದು ನೆರೆನಂಬಿದವರಿಗೆ
ಸುಸಮೀಚನವಾದ ಮೋದಗಳೀವೆ ನಿತ್ಯ
ವಸುಧೆಯ ಭಾರವನು ಧರಿಸಿ ತ್ರಿಕೋಟಿಯ
ಸುಶರೀರಗಳಿಂದಲಿ ಬಹಿರಾವರಣದಲ್ಲಿ
ವಾಸವಾಗಿ ಭೂತಹೃತ್ಕಮಲದಲಿ ನಿಂದು
ಬಿಸಜಾಂಡವನು ಪೊರೆವ ಕರುಣಿ ನೀನೇ
ಅಸಮನೆನಿಪ ಗುರುವಿಯವಿಠ್ಠಲರೇಯ

ವಶವಾಗುವನು ನಿನ್ನ ಕರುಣವಿದ್ದವಗೆ ॥ 7 ॥

॥ ಜತೆ ॥

ಹರಿಯ ವಿಹಾರಕ್ಕೆ ಆವಾಸನೆನಿಸುವೆ

ಗುರುವಿಜಯವಿಠ್ಠಲನ ಸುಪ್ರೀತ ಘನದೂತ ॥

॥ ಶ್ರೀವಿಜಯದಾಸರಂತರ್ಗತ ಶ್ರೀವಾದಿರಾಜಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ॥